ಶ್ರೀರಾಮಕೃಷ್ಣರು ತಮ್ಮ ಸುದೀರ್ಘ ಸಾಧನೆಯಿಂದ ಅನೇಕ ರೀತಿಯ ಆಧ್ಯಾತ್ಮಿಕ ಸಿದ್ಧಿಗಳನ್ನು ಪಡೆದುಕೊಂಡಿದ್ದರು. ಹಿಂದೂಧರ್ಮದ ಹಲವಾರು ಮತಗಳಲ್ಲದೆ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಸಾಧನೆಯನ್ನೂ ಮಾಡಿದ್ದರು. ಇದರಿಂದಾಗಿ ಎಲ್ಲ ಧರ್ಮಗಳೂ ಒಬ್ಬನೇ ದೇವರೆಡೆಗೆ ಕರೆದೊಯ್ಯುವ ಬೇರೆ ಬೇರೆ ಮಾರ್ಗಗಳು ಎಂದು ಅವರು ಚೆನ್ನಾಗಿ ಅರಿತಿದ್ದರು.




